ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಬುಧವಾರ, ದಿನಾಂಕ: ೦೧ನೇ ಜುಲೈ, ೨೦೧೫**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಬೆಳಗಾವಿ ನಗರದ ನೇಕಾರರ ಅಭಿವೃದ್ಧಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೩೧ (೩೭೬) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಅತೀ ಹೆಚ್ಚು ನೇಕಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

(ಆ) ಪಾರಂಪರಿಕ ಕಾಲದಿಂದ ನೇಕಾರಿಕೆ ಮಾಡುತ್ತಿರುವ ಕುಟುಂಬಗಳನ್ನು ಗುರುತಿಸಲಾಗಿದೆಯೇ ; (ವಿವರ ನೀಡುವುದು)

(ಇ) ಬೆಳಗಾವಿ ನಗರದಲ್ಲಿ ಅತೀ ಹೆಚ್ಚು ನೇಕಾರ ಕುಟುಂಬಗಳಿದ್ದು, ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳಿದ್ದು, ಸಂಘಟಿತ ಹಾಗೂ ಅಸಂಘಟಿತ ಮತ್ತು ಕೂಲಿ ಕಾರ್ಮಿಕ ನೇಕಾರರಿಗೆ ವಿಶೇಷವಾಗಿ ಸ್ವಾಭಿಮಾನದಿಂದ ಬದುಕಲು ಯಾವ ರೀತಿ ಯೋಜನೆ ಮಾಡಲಾಗಿದೆ ? (ಪೂರ್ಣ ವಿವರ ನೀಡುವುದು)

## ಜಿಲ್ಲೆಗೊಂದು ಜವಳಿ ಪಾರ್ಕ್ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದು ಚುನಾಯಿತರಾದವರು)–**

೩೨ (೪೦೮) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆ ಯಾವ ಹಂತದಲ್ಲಿದೆ ; ಇದರಿಂದ ಸಮಾಜಕ್ಕೆ ಆಗುವ ಸಹಾಯವೇನು;

(ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈಗಾಗಲೇ ಜವಳಿ ಪಾರ್ಕ್ ರಚನೆಯಾಗಿದೆ ; ಯಾವ ಯಾವ ಜಿಲ್ಲೆಗಳಲ್ಲಿ ರಚನೆಯಾಗಬೇಕಾಗಿದೆ ;

(ಇ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆಯುನ್ನು ಎಂದು ಪೂರ್ಣಗೊಳಿಸಲಾಗುವುದು ? (ವಿವರ ಒದಗಿಸುವುದು)

## ಕಲ್ಬುರ್ಗಿ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ೬ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು ) –**

೩೩ (೪೩೦) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ಜಿಲ್ಲೆಯಲ್ಲಿ ಅಮರ್ಜಾ ಬಲದಂಡೆ ಯೋಜನೆ, ಬೆಣ್ಣೆತೊರೆ ಡ್ಯಾಂ, ಮುಲ್ಲಾಮಾರಿ ಯೋಜನೆ, ಚಂದ್ರೆಪಳ್ಳಿ ಜಲಾಶಯ, ಗಂಡೂರಿ ನಾಲಾ, ಭೀಮಾ ಏತನೀರಾವರಿ ಕಾಲುವೆ ಮುಂತಾದ ೬ ನೀರಾವರಿ ಯೋಜನೆಗಳನ್ನು ಸರ್ಕಾರ ಪ್ರಾರಂಭಿಸಿರುವುದು ನಿಜವೇ ;

(ಆ) ಹಾಗಿದ್ದರೆ, ಈ ಯೋಜನೆಗಳನ್ನು ಯಾವ ದಿನಾಂಕದಂದು ಪ್ರಾರಂಭಿಸಲಾಯಿತು; ಪೂರ್ಣಗೊಂಡ ದಿನಾಂಕ ಯಾವುದು ; ಪ್ರಾರಂಭಿಕ ಯೋಜನೆಯ ವೆಚ್ಚ ಎಷ್ಟು ; ಈಗ ಪೂರ್ಣಗೊಂಡ ಯೋಜನೆಯ ಮೊತ್ತ ಎಷ್ಟು ; ಮತ್ತು ಯೋಜನೆಯ ಲಾಭ ರೈತರಿಗೆ ಸಿಗುವಂತಾಗಲು ಎಷ್ಟು ಹಣ ಬೇಕಾಗುತ್ತದೆ ; (ವಿವರ ಒದಗಿಸುವುದು)

(ಇ) ಈ ಯೋಜನೆಗಳಿಗೆ ಮುಖ್ಯನಾಲೆ, ಡಿಸ್ಟ್ರಿಬ್ಯೂಟರಿ ನಾಲೆ ಪೂರ್ಣಗೊಂಡಿದೆಯೇ ? (ಪೂರ್ಣ ವಿವರ ಒದಗಿಸುವುದು)

## ಅರಣ್ಯ ಸಂಪತ್ತಿನ ಕಳ್ಳತನ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೪ (೪೧೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆಯ ಖಾನಾಪೂರ ಅರಣ್ಯ ಇಲಾಖೆಯಲ್ಲಿ ಅವ್ಯಾಹತವಾಗಿ ಅರಣ್ಯ ಸಂಪತ್ತಿನ ಕಳ್ಳತನ ನಡೆಯುತ್ತಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ. ಇಲ್ಲಿಯವರೆಗೆ ಅರಣ್ಯದಲ್ಲಿ ಎಷ್ಟು ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ;

(ಇ) ಎಷ್ಟು ಜನರಿಗೆ ಶಿಕ್ಷೆ ವಿಧಿಸಲಾಗಿದೆ ;

(ಈ) ಅರಣ್ಯದಲ್ಲಿ ನಡೆಯುತ್ತಿರುವ ಕಳ್ಳತನ ತಡೆಗೆ ಸರಕಾರವು ಕೈಗೊಂಡ ಕ್ರಮಗಳೇನು ?

## ತುಂಗಭದ್ರ ಅಣೆಕಟ್ಟಿನಲ್ಲಿರುವ (ರಿಸರ್ವಾಯರ್) ಹೂಳು (Silt) ತೆಗೆಯುವ ಬಗ್ಗೆ

**ಶ್ರೀ ಎನ್.ಎಸ್. ಭೋಸರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೫ (೩೮೪) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತುಂಗಭದ್ರ ಅಣೆಕಟ್ಟಿನಲ್ಲಿ ಇರುವ ಹೂಳು (Silt) ತೆಗೆಯಲು ಸರಕಾರ ತೆಗೆದುಕೊಂಡಿರುವ ಕ್ರಮಗಳಾವುವು ;

(ಆ) ಹೂಳಿನ (Silt) ಪ್ರಮಾಣ 32 T.M.C. ಪಿಟ್ (Pit) ಸಾಮರ್ಥ್ಯ ನೀರನ್ನು ಕಳೆದುಕೊಳ್ಳುತ್ತಿದ್ದು ಇದನ್ನು ಪುನರ್ ಶೇಖರಣೆ ಮಾಡಲು ಸರಕಾರ ತೆಗೆದುಕೊಂಡ ಕ್ರಮವೇನು ;

(ಇ) NRBC ೧೦೬ ಮೈಲ್‌ನಿಂದ ಗಣಿಕಲ್ಲು ಬ್ಯಾಲನ್ಸಿಂಗ್ ರಿಸರ್ವಾಯರ್‌ಗೆ ರಾಯಚೂರು ನಗರ ಹಾಗೂ ಸುತ್ತಲಿನ ೬೦ (ಅರವತ್ತು) ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಪ್ರಾರಂಭಿಸಿರುವ ಲಿಂಕ್ ಕ್ಯಾನಲ್ ಯೋಜನೆ ಯಾವ ಹಂತದಲ್ಲಿದೆ ;

(ಈ) ರಾಯಚೂರು ನಗರ ಹಾಗೂ ಸುತ್ತಮುತ್ತ ಇರುವ ೬೦ ಗ್ರಾಮಗಳ ಕುಡಿಯುವ ನೀರಿಗಾಗಿ ಸರಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಬಳ್ಳಾರಿ ಜಿಲ್ಲೆಯಲ್ಲಿರುವ ಜಿನಗು ಕೆರೆಗಳ ಕುರಿತು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೬ (೩೫೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಳ್ಳಾರಿ ಜಿಲ್ಲೆಯಲ್ಲಿರುವ ‘‘ಜಿನಗು ಕೆರೆ’’ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಜಿನಗು ಕೆರೆಗಳ ನಿರ್ವಹಣೆಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಈ ಜಿನಗು ಕೆರೆಗಳ ನಿರ್ವಹಣೆ ಮಾಡುವ ಕೆಲಸವನ್ನು ಯಾರು ಯಾರಿಗೆ ನೀಡಲಾಗಿದೆ ;

(ಈ) ಸದರಿಯವರುಗಳು ಸಮರ್ಪಕವಾಗಿ ಜಿನಗು ಕೆರೆಗಳ ನಿರ್ವಹಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳಾವುವು ?

## ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರುಗಳಿಗೆ ನಿವೃತ್ತಿ ವೇತನ ನೀಡುವ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ ) –**

೩೭ (೧೯೦) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ, ಅನುದಾನಕ್ಕೊಳಪಟ್ಟಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎಷ್ಟು ;

(ಆ) ಸದರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಇ) ಈ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಮಂಜೂರು ಮಾಡಿ ಸರ್ಕಾರ ಯಾವ ದಿನಾಂಕದಂದು ಆದೇಶ ಹೊರಡಿಸಿದೆ ;

(ಈ) ಪ್ರಸ್ತುತ ಆದೇಶವನ್ನು ಜಾರಿಗೊಳಿಸಲು ಇರುವ ತೊಂದರೆಗಳೇನು ;

(ಉ) ಆದೇಶ ಜಾರಿ ಕುರಿತು ಈಗ ಇರುವ ಪರಿಸ್ಥಿತಿ ಏನು ; ಆದೇಶ ಜಾರಿಯಾಗಲು ತಡವಾದಲ್ಲಿ ನಿವೃತ್ತಿ ಹೊಂದಲಿರುವ ಸಿಬ್ಬಂದಿಗಳಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

## ಭೂ ಕಂದಾಯಕ್ಕೆ ಸಂಬಂಧಪಟ್ಟ ಬಾಕಿ ಪ್ರಕರಣಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೩೮ (೪೧೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭೂ ಕಂದಾಯಕ್ಕೆ ಸಂಬಂಧಪಟ್ಟು ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಭೂ ಕಂದಾಯಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಇತ್ಯರ್ಥಪಡಿಸಲು ಪೂರ್ಣ ಪ್ರಮಾಣದ ಸೀನಿಯರ್ ಸಿವಿಲ್ ನ್ಯಾಯಾಧೀಶರ ನೇಮಕ ಮಾಡಿ ಇತ್ಯರ್ಥಗೊಳಿಸಲು ಇಲಾಖೆ ಕ್ರಮಕೈಗೊಳ್ಳುವುದೇ ;

(ಇ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ದಂಡಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಅರೆನ್ಯಾಯಿಕ ಅಧಿಕಾರಿಗಳು ಕೆಲಸದ ಒತ್ತಡದಿಂದ ಪ್ರಕರಣಗಳನ್ನು ಇತ್ಯರ್ಥಪಡಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಭೂ ಕಂದಾಯಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ೨೦೧೩–೧೪ ಮತ್ತು ೨೦೧೪–೧೫ರಲ್ಲಿ ಎಷ್ಟು ಪ್ರಕರಣಗಳನ್ನು **ಅದಾಲತ್** ಮೂಲಕ ತೀರ್ಮಾನಿಸಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

**ಕಂದಾಯ ಇಲಾಖೆಯಲ್ಲಿ ಪೋಡಿಗಾಗಿ ಬಂದಿರುವ ಅರ್ಜಿಗಳ ಕುರಿತು**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)** –

೩೯ (೩೧೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೨೦೧೩–೧೪, ೨೦೧೪–೧೫ನೇ ಸಾಲಿನಲ್ಲಿ ಜಮೀನುಗಳನ್ನು ಪೋಡಿ ಮಾಡಿಸಿಕೊಳ್ಳಲು ಬಂದಿರುವ ಅರ್ಜಿಗಳೆಷ್ಟು ;

(ಆ) ಪೋಡಿ ಮಾಡಲು ಇಲಾಖೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಜಮೀನುದಾರರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಅವಧಿಯಲ್ಲಿ ಪೋಡಿ ಮಾಡಿಸಲು ಬಂದ ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ ;

(ಇ) ಪೋಡಿ ಮಾಡಲು ಆಗುತ್ತಿರುವ ವಿಳಂಬಕ್ಕೆ ಕಾರಣ ಏನು ; ಜಮೀನುದಾರರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು ?

## ಎತ್ತಿನಹೊಳೆ ಯೋಜನೆ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೪೦ (೪೦೪) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಎತ್ತಿನಹೊಳೆ ಯೋಜನೆಯ ಕಾಮಗಾರಿಯು ಎಂದಿನಿಂದ ಪ್ರಾರಂಭವಾಗಿದೆ ;

(ಆ) ಈ ಯೋಜನೆಯು ಪ್ರಾರಂಭವಾಗಿದ್ದರೆ ಇದುವರೆಗೆ ಈ ಸಂಬಂಧ ಎಷ್ಟು ಹಣ ವಿನಿಯೋಗಿಸಲಾಗಿದೆ ;

(ಇ) ಯೋಜನೆಯು ನಿರಾತಂಕವಾಗಿ ಮುಂದುವರೆಯಲು ಏನಾದರೂ ಅಡಚಣೆಗಳು ಇವೆಯೇ ; ಅಡಚಣೆಗಳು ಇದ್ದಲ್ಲಿ, ಅವುಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಈ ಯೋಜನೆಯಿಂದ ಬಯಲು ಸೀಮೆ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾರ್ವಜನಿಕರಿಗೆ ಎಂದಿನಿಂದ ನೀರು ಲಭ್ಯವಾಗುವುದು ?

## ಕೌಶಲ್ಯ ತರಬೇತಿ ಯೋಜನೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೧ (೪೩೬) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಕೌಶಲ್ಯ ತರಬೇತಿ ಯೋಜನೆಯಲ್ಲಿ ಉದ್ಯೋಗಸ್ಥರನ್ನಾಗಿ ಮಾಡುವ ಉದ್ದೇಶದಿಂದ ನೀಡುವ ತರಬೇತಿಯಲ್ಲಿ ಕಳೆದ ಎರಡು ವರ್ಷದಿಂದ ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ ;

(ಆ) ಯಾವ ಯಾವ ಟ್ರೇಡ್‌ನಲ್ಲಿ ತರಬೇತಿ ನೀಡಲಾಗಿದೆ ಇದರಿಂದ ಎಷ್ಟು ಜನ ನಿರುದ್ಯೋಗಿಗಳು ಟ್ರೇಡ್ ವೈಸ್ ತರಬೇತಿ ಪಡೆದಿದ್ದಾರೆ ; (ಜಿಲ್ಲಾವಾರು ತರಬೇತಿ ಪಡೆದವರ ಹೆಸರು ಮತ್ತು ಮಾಹಿತಿ ನೀಡುವುದು)

(ಇ) ಇದಕ್ಕಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಎಷ್ಟು ನೆರವನ್ನು ನೀಡಲಾಗುತ್ತಿದೆ ; (ವಿವರ ನೀಡುವುದು)

(ಈ) ಈ ತರಬೇತಿ ಸಂಸ್ಥೆಗಳೊಂದಿಗೆ ಇಲಾಖಾ ಅಧಿಕಾರಿಗಳು ಶಾಮೀಲಾಗಿ ತರಬೇತಿಗೆಂದು ಬಂದ ಕೋಟ್ಯಾಂತರ ರೂಪಾಯಿಯನ್ನು ಲೂಟಿ ಮಾಡಿದ್ದಾರೆಂಬ ಆರೋಪವಿದ್ದು, ಇಲಾಖಾ ಅಧಿಕಾರಿಗಳ ಮೇಲೆ ಆರೋಪವಿರುವುದು ನಿಜವೇ ; ಇದ್ದರೆ ಯಾವ ಅಧಿಕಾರಿಗಳ ವಿರುದ್ಧ ಆರೋಪವಿದೆ ? (ವಿವರ ನೀಡುವುದು)

## ಸೀರೆ, ಪಂಚೆ, ಶಲ್ಯ ಯೋಜನೆಯ ಗೊಂದಲ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು ) –**

೪೨ (೩೯೨) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿನ ಬಡವರಿಗೆ ವರ್ಷಕ್ಕೆ ಎರಡು ಜೊತೆ ಸೀರೆ, ಪಂಚೆ ಮತ್ತು ಶಲ್ಯ ಒದಗಿಸುವುದಾಗಿ ಆಯವ್ಯಯ ಇಲಾಖೆಯ ಆಡಳಿತಾತ್ಮಕ ವರದಿಯಲ್ಲಿ ಜವಳಿ ಮಂತ್ರಿಗಳು ಉಲ್ಲೇಖಿಸಿರುವುದು ನಿಜವೇ ;

(ಆ) ಕಳೆದ ಅಧಿವೇಶನಗಳಲ್ಲಿ ಸರ್ಕಾರ ಒದಗಿಸಿರುವ ಉತ್ತರಗಳಲ್ಲಿ ಕೂಡ ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ ಎಂದು ಭರವಸೆ ನೀಡಿರುವುದು ನಿಜವೇ ;

(ಇ) ವಾಸ್ತವಾಂಶ ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳು, ಸರ್ಕಾರದಲ್ಲಿ ಈ ಯೋಜನೆ ರೂಪಿಸುತ್ತಿಲ್ಲವೆಂದು ಹೇಳಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ದ್ವಂದ್ವ ನಿಲುವಿಗೆ ಕಾರಣವೇನು ;

(ಉ) ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ?

## ಕ್ರೀಡಾ ವಸತಿ ಶಾಲೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೩ (೩೯೮) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಕ್ರೀಡಾ ಇಲಾಖೆಯ ವಸತಿ ನಿಲಯ ಶಾಲೆಗಳ ಸಂಖ್ಯೆ ಎಷ್ಟು ; ಸದರಿ ವಸತಿ ಶಾಲೆಗಳು ಸ್ಥಾಪನೆಗೊಂಡಿರುವುದು ಯಾವಾಗ ; (ಜಿಲ್ಲಾವಾರು, ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಕ್ರೀಡಾ ವಸತಿ ಶಾಲೆಗಳಲ್ಲಿ ಇರುವ ಒಟ್ಟು ವಿದ್ಯಾರ್ಥಿಗಳ / ಕ್ರೀಡಾಪಟುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕ್ರೀಡಾಪಟುಗಳ ತರಬೇತಿಗಾಗಿ ಸರಕಾರದಿಂದ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) –**

೪೪ (೩೩೦) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಾರ್ವಜನಿಕವಾಗಿ ಸದ್ಯ ಬಳಕೆಯಾಗುತ್ತಿರುವ ಕಾರಣಕ್ಕಾಗಿ ಪ್ರವಾಸಿ ತಾಣಗಳ ಶುದ್ಧತೆಗೆ ಹಾಗೂ ಸ್ವಚ್ಛತೆಗೆ ಸಮಸ್ಯೆಯಾಗಿ ಪರಿಣಮಿಸಿರುವ ಕೆರೆ, ನದಿ ನೀರಿನ ಶುದ್ಧತೆಗೆ ಶಾಪವಾಗಿರುವ ಪ್ರಾಣಿ–ಪಕ್ಷಿಗಳ ಆರೋಗ್ಯಕ್ಕೆ ತುತ್ತಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸುವ ಯೋಚನೆ ಸರ್ಕಾರಕ್ಕಿದೆಯೇ ;

(ಆ) ಈ ರೀತಿಯ ಸಮಸ್ಯಾತ್ಮಕ ಪ್ಲಾಸ್ಟಿಕ್ ಉತ್ಪನ್ನಗಳು ತಯಾರಾಗಿ ಮಾರುಕಟ್ಟೆಗೆ ಬಂದ ನಂತರ ಬಳಕೆ ಹಂತದಲ್ಲಿ ಅದನ್ನು ತಡೆಯುವ ಮತ್ತು ನಿಷೇಧಿಸುವ ಪ್ರಯತ್ನ ಮಾಡುವ ಬದಲು ತಯಾರಿಕಾ (ಉತ್ಪಾದನಾ) ಹಂತದಲ್ಲಿ ಅಂದರೆ ಸಂಬಂಧಿಸಿದ ಕೈಗಾರಿಕೆಗಳನ್ನು ನಿರ್ಬಂಧಿಸುವ ಹಾಗೂ ಈ ರೀತಿಯ ಅನಾವಶ್ಯಕ ತಯಾರಿಕೆಗಳನ್ನು ಸಂಪೂರ್ಣ ತಡೆಯುವ ಸಕಾರಾತ್ಮಕ ಕಾನೂನು ಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕಿರುವ ಸಮಸ್ಯೆಗಳೇನು ;

(ಇ) ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುವುದನ್ನು ಈಗಾಗಲೇ ನಿಷೇಧಿಸಿದ್ದಲ್ಲಿ ಅದಕ್ಕಾಗಿ ಅನುಸರಿಸಿದ ಮಾನದಂಡಗಳೇನು ; (ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಪ್ಲಾಸ್ಟಿಕ್ ಬಳಕೆ ನಿಷೇಧದ ಬಗ್ಗೆ ಮುಂದುವರೆದ ರಾಷ್ಟ್ರಗಳು ಅಳವಡಿಸಿಕೊಂಡ ನಿಯಮಗಳೇನು ? (ವಿವರಗಳನ್ನು ಒದಗಿಸುವುದು)

## ಸರ್ಕಾರಿ I.T.I. ಕಾಲೇಜು ಪ್ರಾರಂಭಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) –**

೪೫ (೪೩೧) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು ; ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ ;

(ಆ) ಸದರಿ ಸರ್ಕಾರಿ ಐ.ಟಿ.ಐ. ಕಾಲೇಜನ್ನು ಯಾವ ಕಾರಣಕ್ಕಾಗಿ ಪ್ರಾರಂಭಿಸಿರುವುದಿಲ್ಲ ;

(ಇ) ಹಾಗಾದರೆ, ಯಾವಾಗ ಪ್ರಾರಂಭ ಮಾಡಲಾಗುವುದು ;

(ಈ) ಸ್ಥಳೀಯರು ಎಲ್ಲಾ ಮೂಲಭೂತ ಸೌಲಭ್ಯವನ್ನು ಒದಗಿಸಿ ಕೊಡಲು ಸಿದ್ಧರಿದ್ದರೂ ಕೆಲ ಅಧಿಕಾರಿಗಳು ತಪ್ಪುಮಾಹಿತಿ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಸದರಿ ಕಾಲೇಜು ಪ್ರಾರಂಭಿಸಲು ತೆಗೆದುಕೊಂಡ ಕ್ರಮವೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಸುವರ್ಣಸೌಧ ಘಟಕ, ಕಾ.ಸೂ. 76, ಪ್ರತಿಗಳು 1500 – ಪಿ2